**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**
**<u>ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ</u>**

**ಉಪಸ್ಥಿತರುಃ  ನಂದಿನಿ ಎಂ ಎನ್.,ಬಿ.ಎ., ಎಲ್.ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು , ಕೊಪ್ಪ**

**<u>ಸಿ. ಸಿ. ನಂ.359/2018</u>**

ಪಿರ್ಯಾದಿಃ ಶ್ರೀ ಚಂದನ್ ಎಸ್. ರಾವ್, ಬಿನ್ ಶ್ರೀ ಎಂ. ಶೃಂಗೇಶ್ವರ, ವಯಸ್ಕರು, ವಾಸ ಹುಲ್ಲುಮಕ್ಕಿ, ಕೊಪ್ಪ ಅಂಚೆ ಮತ್ತು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಶ್ರೀ ಜಿ.ಎಂ.ವಿ., ವಕೀಲರು)

**ವಿರುದ್ಧ**

ಆರೋಪಿಃ ಶ್ರೀ ತಿಪ್ಪೇಸ್ವಾಮಿ ಬಿನ್ ಬಸವಪ್ಪ, ವಯಸ್ಕರು, ವಾಸ ನಂಃ22, 14 ನೇ ಕ್ರಾಸ್, ಸಪ್ತಗಿರಿ ಕಾಲೇಜ್ ಮುಖ್ಯ ರಸ್ತೆ, ಹನುಮಂತಗೌಡರ ಮುಖ್ಯ ರಸ್ತೆ, ಚಿಕ್ಕಸಂದ್ರ, ಗೆಳೆಯರ ಬಳಗ ಲೇಔಟ್, ಚಿಕ್ಕಬಾಣಾವರ, ಬೆಂಗಳೂರು.

(ಶ್ರೀಮತಿ ಎಸ್.ಬಿ., ವಕೀಲರು)

**<u>::ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ದಾಖಲಿಸಿದ ಆರೋಪಿಯ ಹೇಳಿಕೆ ::</u>**

**ಪ್ರಶ್ನೆಃ 1** ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ ಕೇಳಿದ್ದೇನೆ.

**ಪ್ರಶ್ನೆಃ 2** ಪ್ರಾಸಾ 1 ಚಂದನ್ ಎಸ್. ರಾವ್, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ನೀವು ನಿಮ್ಮ ಕೈ ಸಾಲ ತೀರಿಸುವ ಸಲುವಾಗಿ ನಿಮಗೆ ಹಣದ ಅವಶ್ಯಕತೆ ಇದೆ ಎಂದು ನೀವು ಸಾಲ ನೀಡುವಂತೆ ಕೇಳಿದ ಮೇರೆಗೆ ಜನವರಿ 2017 ರಂದು ರೂ.2,00,000/-ರೂಪಾಯಿಗಳನ್ನು ಸಾಲವಾಗಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿಸಿ?

ಉತ್ತರಃಸುಳ್ಳು

**ಪ್ರಶ್ನೆ: 3** ಪ್ರಾಸಾ 1 ರವರು ಮುಂದುವರೆದು, ಆರೋಪಿ ಸದರಿ ಸಾಲವನ್ನು 3 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿದ್ದು, ನಂತರ ಮರುಪಾವತಿ ಮಾಡುವ ಸಲುವಾಗಿ ನನ್ನ ಹೆಸರಿಗೆ ಸ್ಟೇಟ್ ಬ್ಯಾಂಕ್ ಮೈಸೂರು (ಪ್ರಸ್ತುತ ಸ್ಟೇಟ್ ಬ್ಯಾಂಕ್ ಇಂಡಿಯಾ), ಹೇಸರಘಟ್ಟ ಮುಖ್ಯ ರಸ್ತೆ ಶಾಖೆಯ ದಿನಾಂಕಃ 20.12.2017 ರ ಚೆಕ್ ನಂ.390221, 390222, 390223, 390219 ರೂ.50,000/-ಗಳಿಗೆ ನೀಡಿರುತ್ತಾರೆ. ಸದರಿ ಚೆಕ್‌ಗಳನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿಸಿ?

ಉತ್ತರಃಸುಳ್ಳು

**ಪ್ರಶ್ನೆ: 4** ಪ್ರಾಸಾ 1 ರವರು ಮುಂದುವರೆದು, ಚೆಕ್ ನಂ. 390221 ಅನ್ನು ತಮ್ಮ ಖಾತೆ ಇರುವ ಕೆನರಾ ಬ್ಯಾಂಕ್, ಹಿರೆಕೊಡಿಗೆ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ. ಆದರೆ ಆರೋಪಿಯ ಖಾತೆ ಇರುವ ಬ್ಯಾಂಕ್ ನವರು ಆರೋಪಿಯ ಖಾತೆಯಲ್ಲಿ **'ಸಾಕಷ್ಟು ಹಣ ಇಲ್ಲ'** ಎಂಬ ಕಾರಣ ನೀಡಿ ಚೆಕ್ ಅಮಾನ್ಯಗೊಳಿಸಿ ದಿನಾಂಕಃ09.02.2018 ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿಸಿ?

ಉತ್ತರಃಸುಳ್ಳು

**ಪ್ರಶ್ನೆ: 5** ಪ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 26.02.2018 ರಂದು ಆರೋಪಿಗೆ ನಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ, ಚೆಕ್ ನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ. ಸದರಿ ನೋಟೀಸ್ ದಿನಾಂಕ 15.03.2018 ರಂದು "No such person in the address" ಎಂಬುದಾಗಿ ವಾಪಾಸ್ಸಾಗಿರುತ್ತದೆ. ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿಸಿ?

ಉತ್ತರಃಸುಳ್ಳು

**ಪ್ರಶ್ನೆ: 6** ಪ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ನನಗೆ ಚೆಕ್ ಅನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ, ನಿಪಿಃ 1 ರಿಂದ ನಿಪಿಃ 4 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿಸಿ?

ಉತ್ತರಃ ಸುಳ್ಳು

**ಪ್ರಶ್ನೆ: 7** ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃತಿಳಿಯಿತು.

**ಪ್ರಶ್ನೆ: 8** ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃಪಿರ್ಯಾದುದಾರಿಂದ ನಾನು ಯಾುವುದೇ ಕೈ ಸಾಲವನ್ನು ಪಡೆದುಕೊಂಡಿರುವುದಿಲ್ಲ.

**ಪ್ರಶ್ನೆ: 9** ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ ಇದೆ.

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿ/- 03.07.2026.
(ಶ್ರೀಮತಿ ನಂದಿನಿ ಎಂ ಎನ್ )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ., ಕೊಪ್ಪ.

ದಿನಾಂಕಃ 03.07.2026.